ದಿನಾಂಕಃ 16-03-2017 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ - ಶ್ರೀ ಎಸ್.ಎಂ.ಎನ್. ವಕೀಲರಿಂದ.

ನಾನು ಎಸ್‌ಎಸ್‌ಎಲ್‌ಸಿವರೆಗೆ ಓದಿರುತ್ತೇನೆ. ನನ್ನ ಮುಖ್ಯ-ವಿಚಾರಣೆಗೆ ಮಾಹಿತಿಯನ್ನು ನನ್ನ ಮಗನು ಕೊಟ್ಟಿರುತ್ತಾನೆ. ನನ್ನ ಮಗನು ನನ್ನ ಜೊತೆ ಮಾನ್ಯ ನ್ಯಾಯಾಲಯಕ್ಕೆ ಬಂದಿರುತ್ತಾನೆ. 'ಎ' ಮತ್ತು 'ಬಿ' ಷೆಡ್ಯೂಲ್‌ನಲ್ಲಿ ಜಮೀನು ಮತ್ತು ಮನೆಗಳು ಬರೆದಿರುತ್ತಾರೆ. ನಾಲ್ಕು ಜಮೀನುಗಳಿರುತ್ತವೆ. ನಾಲ್ಕು ಜಮೀನಿನ ಸರ್ವೆ ನಂಬರ್ ಮತ್ತು ವಿಸ್ತೀರ್ಣ ನನಗೆ ಹೇಳಲು ಆಗುವುದಿಲ್ಲ. 'ಬಿ' ಷೆಡ್ಯೂಲ್ ಎಂದರೆ ನನಗೆ ಗೊತ್ತಿರುವುದಿಲ್ಲ. 'ಬಿ' ಷೆಡ್ಯೂಲ್‌ನಲ್ಲಿ ಬರೆದಿರುವಂತಹ ವಿಷಯವು ನನಗೆ ಗೊತ್ತಿರುವುದಿಲ್ಲ.

2. ಕೆಂಚಮಲ್ಲನಹಳ್ಳಿಯಲ್ಲಿ ಸದ್ಯಕ್ಕೆ ವಾಸವಾಗಿದ್ದು, ಮೊದಲು ಹೊಸಹಳ್ಳಿಯಲ್ಲಿ ವಾಸವಾಗಿದ್ದೆವು. 10-12 ವರ್ಷಗಳಿಂದ ಕೆಂಚಮಲ್ಲನಹಳ್ಳಿಯಲ್ಲಿ ವಾಸವಾಗಿರುತ್ತೇನೆ. ನಾನು ಸೊಸೈಟಿಯಲ್ಲಿ ಸೆಕ್ರೆಟರಿಯಾಗಿ ಕೆಲಸ ಮಾಡುತ್ತಿದ್ದೆನು. 1965 ರಿಂದ ಸೆಕ್ರೆಟರಿಯಾಗಿ ಕೆಲಸ ನಿರ್ವಹಿಸುತ್ತಿದ್ದೆನು. 10 ವರ್ಷ-ಹೊಸಹಳ್ಳಿ, 06 ವರ್ಷ-ರಾಮದುರ್ಗ, 01 ವರ್ಷ-ಜರ್ಮಲಿ, 10 ವರ್ಷ-ರಾಜಾಪುರ, 01 ವರ್ಷ-ಮೆಟ್ರಿಕಿಯಲ್ಲಿ ಕೆಲಸ ಮಾಡಿರುತ್ತೇನೆ. ನಿವೃತ್ತಿ ಹೊಂದಿದ ನಂತರ ಕೆಂಚಮಲ್ಲನಹಳ್ಳಿಯಲ್ಲಿ ವಾಸವಾಗಿರುತ್ತೇನೆ. 10 ವರ್ಷ ಹೊಸಹಳ್ಳಿಯಲ್ಲಿ ಕೆಲಸ ಮಾಡಿದ ನಂತರ ಹೊಸಹಳ್ಳಿ ಬಿಟ್ಟು ರಾಮದುರ್ಗಕ್ಕೆ ಹೋಗಿರುತ್ತೇನೆ ಎಂದರೆ ಸರಿ.

3. 1978 ರಿಂದ ದಾವಾ ಸ್ವತ್ತಿನಲ್ಲಿ 01ನೇ ಪ್ರತಿವಾದಿ ಉಳುಮೆ ಮಾಡಿಕೊಂಡು ಬರುತ್ತಿದ್ದಾನೆ ಎಂದರೆ ಸಾಕ್ಷಿಯು ಆತನೇ ಯಜಮಾನನಾಗಿದ್ದರಿಂದ ಉಳುಮೆ ಮಾಡಿಕೊಂಡು ಬಂದಿರುತ್ತಾನೆ ಎಂದು ಹೇಳುತ್ತಾರೆ. 25-26 ಎಕರೆ ಮೇಲೆ ಈ ದಾವೆಯನ್ನು ಸಲ್ಲಿಸಿರುತ್ತೇನೆ. ಒಂದು ಎಕರೆಗೆ 50 ಸಾವಿರದಿಂದ ಒಂದು ಲಕ್ಷ ಬೆಲೆ ಬಾಳುತ್ತದೆ. ಖಾನಾಹೊಸಹಳ್ಳಿ ಗ್ರಾಮದ ಪಕ್ಕದಲ್ಲಿರುವ ಜಮೀನು 05 ಎಕರೆ 05 ಸೆಂಟ್ಸ್ ಇರುತ್ತದೆ. ಅದರ ಪಕ್ಕದಲ್ಲಿಯೇ ಜಮೀನು, ಸೈಟುಗಳಾಗಿ ಪರಿವರ್ತನೆ ಹೊಂದಿವೆ ಎಂದರೆ ಸರಿ. ಒಂದು ಸೈಟ್‌ಗೆ ಸದ್ಯಕ್ಕೆ 5-6 ಲಕ್ಷ ಬೆಲೆ ಬಾಳಬಹುದು. ನಾನು ದಾವೆ ಹೂಡಿದಾಗ ಕೂಡ ಸೈಟ್‌ಗೆ 5-6 ಲಕ್ಷ ಬೆಲೆ ಬಾಳುತ್ತಿತ್ತು ಎಂದರೆ ಸರಿ. ಒಂದು ಎಕರೆಗೆ 20 ಸೈಟ್ ಆಗಬಹುದು ಎಂದರೆ ಸರಿ. 05 ಎಕರೆಗೆ 05 ಸೆಂಟ್ಸ್‌ನಲ್ಲಿ 100 ಸೈಟ್‌ಗಳಾಗಬಹುದು ಎಂದರೆ ಸರಿ. ಈ ಒಂದೇ ಆಸ್ತಿಯ ಬೆಲೆ 05 ಕೋಟಿ ಆಗಬಹುದು ಎಂದರೆ ಸರಿ. ದಾವಾ ಪತ್ರದಲ್ಲಿ ಈ ಆಸ್ತಿಯ ಬೆಲೆ ರೂ. 40,000/- (ನಲವತ್ತು ಸಾವಿರ ರೂಪಾಯಿ) ಎಂದು ತೋರಿಸಿದ್ದೇನೆ ಎಂದರೆ ಸರಿಯಲ್ಲ.

4. ಸರ್ವೆ ನಂಃ 40ಬಿ/1, 03 ಎಕರೆ 36 ಸೆಂಟ್ಸ್ ಸ್ವತ್ತು ಹುಲಿಕೆರೆ ಗ್ರಾಮಕ್ಕೆ ಸೇರುತ್ತದೆ. ದಕ್ಷಿಣಕ್ಕೆ- ರಾಟಿ ಬಸಣ್ಣರ ಜಮೀನು, ಪೂರ್ವಕ್ಕೆ- ನಮ್ಮದೇ ಇನ್ನೊಂದು ಜಮೀನು 06 ಎಕರೆ, ಪಶ್ಚಿಮಕ್ಕೆ- ಬಸಯ್ಯನವರ ಜಮೀನು ಮತ್ತು ಉತ್ತರಕ್ಕೆ- ಚಿಕ್ಕವಾಡಿಗಿ ಲಕ್ಕಯ್ಯನವರ ಜಮೀನು. ನಾನು ಹೇಳಿದ ಚಕ್ಕುಬಂದಿ ಸುಳ್ಳು ಎಂದರೆ ಸರಿಯಲ್ಲ. ನಾನು ಜಮೀನಿನ ಸ್ವಾದೀನದಲ್ಲಿರದ ಕಾರಣ ಪೂರ್ವಕ್ಕೆ ನಮ್ಮದೇ ಇನ್ನೊಂದು ಜಮೀನಿನ ಸರ್ವೆ ನಂಬರ್ ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ಪೂರ್ವಕ್ಕೆ 06 ಎಕರೆ ಜಮೀನು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಸರ್ವೆ ನಂಃ 668 ಹೊಸಹಳ್ಳಿ ಗ್ರಾಮಕ್ಕೆ ಸೇರುತ್ತದೆ. 01ನೇ ಪ್ರತಿವಾದಿಯು ಜಮೀನಿನಲ್ಲಿ ಏನು ಬೆಳೆಯುತ್ತಾನೆ ಎಂದರೆ ಸಾಕ್ಷಿಯು ಜೋಳ ಬೆಳೆಯುತ್ತಾನೆ ಎಂದು ಹೇಳುತ್ತಾರೆ. ಐಟಂ ನಂಃ 02 ರಲ್ಲಿ 01ನೇ ಪ್ರತಿವಾದಿಯು ಸೂರ್ಯಕಾಂತಿ ಮತ್ತು ಜೋಳ ಬೆಳೆಯುತ್ತಾನೆ. ಐಟಂ ನಂಃ 03 ರಲ್ಲಿ 01ನೇ ಪ್ರತಿವಾದಿ ಸೂರ್ಯಕಾಂತಿ ಬೆಳೆಯುತ್ತಾನೆ. ಐಟಂ ನಂಃ 05 ರಲ್ಲಿ 01ನೇ ಪ್ರತಿವಾದಿ ಸೂರ್ಯಕಾಂತಿ ಬೆಳೆಯುತ್ತಾನೆ. ಐಟಂ ನಂಃ 06 ರಲ್ಲಿ 01ನೇ ಪ್ರತಿವಾದಿ ಜೋಳ ಮತ್ತು ಸೂರ್ಯಕಾಂತಿ ಬೆಳೆಯುತ್ತಾನೆ. ಐಟಂ ನಂಃ 07 ರಿಂದ 13 ರಲ್ಲಿ 01ನೇ ಪ್ರತಿವಾದಿಯು ಶೇಂಗಾ ಬೆಳೆಯುತ್ತಾನೆ. ಸುಮಾರು 55 ವರ್ಷಗಳಿಂದ 01ನೇ ಪ್ರತಿವಾದಿ ಎಲ್ಲಾ ಜಮೀನುಗಳಲ್ಲಿಯೂ ಬೆಳೆಯನ್ನು ಬೆಳೆಯುತ್ತಾನೆ.

6. 03ನೇ ಪ್ರತಿವಾದಿಯ ಗಂಡ ತೀರಿಕೊಂಡು 14 ವರ್ಷವಾಯಿತು. 03ನೇ ಪ್ರತಿವಾದಿ ತವರುಮನೆಯಲ್ಲಿ ವಾಸ ಮಾಡುತ್ತಿದ್ದು 40 ವರ್ಷವಾಯಿತು. 03ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಬೆಳೆಯನ್ನು ಬೆಳೆದಿರುವುದಿಲ್ಲ ಎಂದರೆ ಸರಿ. 03ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಸ್ವಾದೀನದಲ್ಲಿಲ್ಲ ಎಂದರೆ ಸರಿ. 01ನೇ ಪ್ರತಿವಾದಿಗೆ ಇಬ್ಬರು ಗಂಡುಮಕ್ಕಳು ಇರುತ್ತಾರೆ.

ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಮುಂದಿನ ಪಾಟೀಸವಾಲನ್ನು ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.